ಆ) ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಲು ಸರ್ಕಾರದವರು ತೆಗೆದುಕೊಂಡ ಕ್ರಮವೇನು?

ಶ್ರೀ ಟಿ ಎನ್. ನರಸಿಂಹಮೂರ್ತಿ. (ಬಂದರು, ವಿೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು). —

ಆ) ಬಂದಿದೆ.

ಆ) ಹಾಸನ ನಗರಕ್ಕೆ ಒಂದು ಸಮಗ್ರ ನೀರು ಸರಬರಾಜು ಯೋಜನೆಯನ್ನು ರೂ. ೩೫೦ ೦೦ ಲಕ್ಷ ಅಂದಾಜಿನಲ್ಲಿ ತಯಾರಿಸಲಾಗಿದೆ. ಹುಡ್ಕೋ ವಸತಿಯ ಸಹಾಯಧನದಿಂದ ಕೈಗೊಳ್ಳಲಾಗುವ ಇತರ ಯೋಜನೆಗಳೊಂದಿಗೆ ಇದನ್ನೂ ಸಹ ಸೇರಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ ಪ್ರಶ್ನೋತ್ತರ ಸಮಯವನ್ನು ಹೆಚ್ಚಿಸುವ ಬಗ್ಗೆ

ಅಧ್ಯಕ್ಷರು.—ಲಿಖಿತ ಉತ್ತರಗಳನ್ನು ಮಂಡಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಶ್ರೀ ಕೆ.ಎಚ್. ಹನುಮೇಗೌಡ.—ನಮ್ಮ ಪ್ರಶ್ನೆ ಕೊನೆಯಲ್ಲಿ ಬರುತ್ತದೆ. ಈ ರಾಜ್ಯಕ್ಕೆ ಸಂಬಂಧಪಟ್ಟಹಾಗೆ, ನಮ್ಮ ಕ್ಷೇತ್ರದ ಜನತೆಗೆ ಸಂಬಂಧಪಟ್ಟಹಾಗೆ ನಮ್ಮ ಕ್ಷೇತ್ರದ ಜನತೆಗೆ ಸಂಬಂಧಪಟ್ಟ ಹಾಗೆ ನಾವು ಪ್ರಶ್ನೆಗಳನ್ನು ಕಳುಹಿಸಿರುತ್ತೇವೆ. ಇದಕ್ಕೆ ಉತ್ತರ ಕೊಡದೇಹೋದರೆ ಹೇಗೆ? ಕೊಶ್ಚನ್ ಅವರ್ ಜಾಸ್ತಿ ಮಾಡಿ. ಇಲ್ಲದೇ ಹೋದರೆ ಒಂದೊದೂ ಪ್ರಶ್ನೆಗೆ ಇಷ್ಟೆ ಸಮಯ ಎಂದು ನಿಗದಿ ಮಾಡಿ.

ಅಧ್ಯಕ್ಷರು.—ನಿನ್ನೆ ನಾಯಕ್ ಅವರು ಸಭೆಯ ಗಮನಕ್ಕೆ ಈ ವಿಚಾರವನ್ನು ತಂದಾಗ ನನ್ನ ನಿಲುವು ಏನು ಎಂಬುದನ್ನು ತಿಳಿಸಿದ್ದೇನೆ. ಪ್ರಶ್ನೋತ್ತರ ವೇಳೆ ೬೦ ನಿಮಿಷ ಎಂದು ರೂಲ್ಸ್ ಆಫ್ ಪ್ರೊಸೀಜರ್ ಅಂಡ್ ಕಂಡಕ್ಟ್ ಆಫ್ ಬಿಸಿನೆಸ್‌ನಲ್ಲಿ ನಮೂದಿತವಾಗಿದೆ. ಈ ಸಭೆಯು ಒಟ್ಟಾರೆ ಅಭಿಪ್ರಾಯ ಪ್ರಶ್ನೋತ್ತರ ಕಾಲವನ್ನು ೯೦ ನಿಮಿಷ ಮಾಡಬೇಕೆಂಬುದಾದರೆ ಇಲ್ಲಿ ಸಭಾ ನಾಯಕರಿದ್ದಾರೆ, ವಿರೋಧ ಪಕ್ಷದ ನಾಯಕರಿದ್ದಾರೆ ಮತ್ತಿತರ ರಾಜಕೀಯ ಪಕ್ಷಗಳ ನಾಯಕರಿದ್ದಾರೆ ಇವರೆಲ್ಲರೂ ಸೇರಿ ತೀರ್ಮಾನ ತೆಗೆದುಕೊಳ್ಳಬಹುದು. ಇದರ ಬಗ್ಗೆ ಜಿಜ್ಞಾಸೆ ಬೆಳೆಸಬೇಕು ಎಂದು ನನಗೆ ಇಷ್ಟ ಇಲ್ಲ. ಆದ್ದರಿಂದ ನೀವು ಸಭೆಯವರು ಹೇಗೆ ಮಾರ್ಗದರ್ಶನ ಮಾಡುತ್ತೀರೋ ಅದರ ಪ್ರಕಾರ ನಾನು ನಡೆಯಬೇಕೆಂದು ತೀರ್ಮಾನ ಮಾಡಿದ್ದೇನೆ. ನಾನು ಮೊದಲು ವಿಧಾನಸಭಾ ಸದಸ್ಯನಾಗಿದ್ದೆ, ವಿಧಾನಪರಿಷತ್ತಿನ ಸದಸ್ಯನಾಗಿದ್ದೆ, ಲೋಕಸಭಾ ಸದಸ್ಯನಾಗಿದ್ದೆ. ಎಲ್ಲಿಯೂ ಕೂಡ ನಮೂದಿತ ವಾಗಿರತಕ್ಕ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುವುದಕ್ಕೆ ಸಾಧ್ಯವಾಗಿಲ್ಲ. ಕೆಲವು ಸಮಯ ಮುಖ್ಯವಾದ ಪ್ರಶ್ನೆ ಬರುತ್ತದೆ. ಗಡಿ ವಿವಾದದ ಪ್ರಶ್ನೆ. ದರೋಡೆ ಪ್ರಶ್ನೆ ಮಂತಾದವು ಗಳು ಪ್ರಾಮುಖ್ಯವಾದ ಪ್ರಶ್ನೆಗಳು. ಸ್ವಾಭಾವಿಕವಾಗಿ ಆ ಪ್ರಶ್ನೆಗಳಿಗೆ ಹೆಚ್ಚು ಸಮಯ ಕೊಡಬೇಕಾಗುತ್ತದೆ. ಸ್ಥಳೀಯ ಸಮಸ್ಯೆಗಳ ವಿಚಾರ ಬಂದಾಗ ಕುಂದುಕೊರತೆಗಳನ್ನು ಹೇಳಿಕೊಳ್ಳು ವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಈ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿರುವಾಗ ನಾನು ಹೇಗೆ ಸಭೆ ನಡೆಸಬೇಕು ಎಂದು ಹನುಮೇಗೌಡರು ಹೇಳುತ್ತಾರೋ ಅದರಂತೆ ನಡೆದುಕೊಳ್ಳುವುದಕ್ಕೆ ನಾನು ತಯಾರಿದ್ದೇನೆ. ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ಇದು ಈ ಸದನದಲ್ಲಿ ಮಾತ್ರವಲ್ಲ ಲೋಕಸಭೆಯಲ್ಲಿ ರಾಜ್ಯಸಭೆಯಲ್ಲಿ ಮಹಾರಾಷ್ಟ್ರ ವಿಧಾನಸಭೆಯಲ್ಲಿ. ಕೇರಳ ವಿಧಾನಸಭೆಯಲ್ಲಿ ಮತ್ತು ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಕೂಡ ಆಗುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ.—ನಿನ್ನೆ ಎರಡು ಮೂರು ಪ್ರಶ್ನೆಗಳು ಲ್ಯಾಪ್ಸ್ ಆಯಿತು. ಇವತ್ತು ೨೦ ಪ್ರಶ್ನೆಯಲ್ಲಿ ೧೦ ಪ್ರಶ್ನೆಗಳು ಲ್ಯಾಪ್ಸ್ ಆಯಿತು ನಮ್ಮ ಕ್ಷೇತ್ರದ ಮತದಾರರು ಕಾಯುತ್ತಿರುತ್ತಾರೆ. ನಮ್ಮ ಸದಸ್ಯರು ಪ್ರಶ್ನೆ ಕೇಳಿದಾ ರೆಯೇ ಅಥವಾ ನಿದ್ದೆ ಹೋಗುತ್ತಿದ್ದಾರೆಯೇ ಅಥವಾ ಇನ್ಸ್‌ಪೆಕ್ಟ್ ಮಾಡುತ್ತಿದ್ದಾರೆಯೇ. ಅಥವಾ ಲೆಜಿಸ್ಲೇಟರ್ಸ್ ಹೋಮ್‌ನಲ್ಲಿ ಹರಟೆ ಹೊಡೆಯು

ತ್ತಿದ್ದಾರೆಯೇ ಎಂದು ನೋಡುತ್ತಿರುತ್ತಾರೆ. ನಾವು ಇಂತಹ ಮುಖ್ಯ ಪ್ರಶ್ನೆಗಳನ್ನು ಕೇಳುವಾಗ ದಿನಬೆಳಗಾದರೆ ಲ್ಯಾಪ್ಸ್ ಆದರೆ ನಮ್ಮ ಗತಿ ಏನಾಗಬೇಕು? ದಯವಿಟ್ಟು ರೂಲ್ಸ್ ಕಮಿಟಿಯಲ್ಲಿ ಇದನ್ನು ಬದಲಾವಣೆ ಮಾಡಬೇಕು. ತಮಗೆ ಇನ್‌ಹರೆಂಟ್ ಪವರ್ ಇದೆ. ಆ ಪ್ರಕಾರ ಅವಧಿಯನ್ನು ತಾವು ಅರ್ಧಗಂಟೆ ಹೆಚ್ಚು ಮಾಡಬಹುದು. ಅಥವಾ ಪ್ರಶ್ನೆಗಳ ಸಂಖ್ಯೆಯನ್ನೇ ೨೦ರ ಬದಲು ೧೫ ಅಥವಾ ೧೦ ಎಂದು ಮಾಡುವುದರಿಂದ ಎಲ್ಲಿ ಪ್ರಶ್ನೆಗಳೂ ಚರ್ಚೆಗೆ ಬರುತ್ತವೆ. ಸುಮ್ಮನೆ ೨೦ ಹಾಕಿ ೧೮ನ್ನು ಲ್ಯಾಪ್ಸ್ ಮಾಡಿದರೆ ಅದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಈ ಬಗ್ಗೆ ರೂಲ್ಸ್ ಕಮಿಟಿ ಕರೆದು ಆ ಮೂಲಕ ಮಾರ್ಪಾಟು ಮಾಡಿದರೆ ಅನುಕೂಲವಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ. ಹತ್ತಾರು ಜನ ಸದಸ್ಯರ ಪ್ರಶ್ನೆಗಳು ಲಾಪ್ಸ್ ಆದರೆ ಮತದಾರರು ನಮಗೆ ಕ್ಷಮಾಪಣೆ ಮಾಡುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ —ಈಗ ಸಾಕಷ್ಟು ಕಾಲಾವಧಿವರೆಗೆ ಸದನ ಸೇರುತ್ತಿಲ್ಲ. ಕಡಿಮೆ ಅವಧಿಗಾಗಿ ನಾವು ಸೇರಿದ್ದೇವೆ. ಈಗ ಅನೇಕ ಸಮಸ್ಯೆಗಳು ಇವೆ. ಈಗ ಏನೂ ೨೦ ಪ್ರಶ್ನೆಗಳು ಇವೆ ಇವುಗಳ ಸಂಖ್ಯೆ ೨೫ ಮಾಡಬೇಕೇ ೧೦ಕ್ಕೆ ಇಳಿಸುವುದು ಬೇಡ ಉಪ ಪ್ರಶ್ನೆ ಕೇಳುವುದಕ್ಕೆ ತಾವು ನಿಯಂತ್ರಣ ಮಾಡಿದರೆ ನಾವೂ ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ. ಉಪಪ್ರಶ್ನೆ ಕೇಳುವುದು ಕಡಿಮೆಯಾದರೆ ಎಲ್ಲ ಪ್ರಶ್ನೆಗಳಿಗೂ ಉತ್ತರ ಸಿಗಲು ಅವಕಾಶವಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಪ್ರಶ್ನೋತ್ತರ ಕಾಲ ನಿಗದಿ ಮಾಡಿರುವುದು ಕ್ವಶ್ಚನ್ ಹವರ್ ಎಂದು ಹೇಳಿಯೇ ಹೊರತು ಆವರ್ಸ್ ಎಂದು ಹೇಳಿಲ್ಲ. ಮತ್ತೆ ಇದು ಕೇವಲ ಕರ್ನಾಟಕ ವಿಧಾನಸಭೆಗೆ ಮಾತ್ರ ಸೀಮಿತ ಆಲ್ಲ. ಎಲ್ಲಾ ಕಡೆ ಒಂದೇ ಗಂಟೆ ಇರುವುದು. ನಾನೂ ಕೂಡಾ ಪಾರ್ಲಿಮೆಂಟ್‌ನಲ್ಲಿ ಕೆಲಸ ಮಾಡಿದ್ದೇನೆ. ಕೆಲವು ಸಾರಿ ೨೦ ಪ್ರಶ್ನೆಯಲ್ಲಿ ಒಂದೇ ಪ್ರಶ್ನೆ ಇಡೀ ಗಂಟೆಯನ್ನು ತೆಗೆದು ಕೊಂಡಿದ್ದನ್ನು ನಾವು ಪಾರ್ಲಿಮೆಂಟ್‌ನಲ್ಲಿ ಕಂಡಿದ್ದೇವೆ. ಇದನ್ನು ಕ್ವಶ್ಚನ್ ಹವರ್ಸ್ ಎಂದು ಕರೆಯುವುದಾದರೆ ನಸ್ಮದಂ ಅಭ್ಯಂತರ ಇಲ್ಲ. ಒಟ್ಟಾರೇ ರಾಷ್ಟ್ರದಲ್ಲೇ ಒಂದು ನೀತಿ ಇರುವಾಗ ಆದರ ಹೊರಗಡೆ ನಾವು ಹೋಗುವುದು ಬೇಡ. ಒಂದೊಂದು ಸಾರಿ ಇಲ್ಲಿ ಪ್ರಶ್ನೆಗಳಿಗೆ ಸೀಮಿತವಾಗಿ ಒಂದೂವರೆ ಎರಡು ಗಂಟೆಗಳ ಕಾಲ ಪ್ರಶ್ನೋತ್ತರ ವೇಳೆ ಹೋದದ್ದು ಉಂಟು. ಆ ವಿಷಯ ತಮಗೆ ಬಿಟ್ಟಿದ್ದು, ಪಂಖ್ಯಾವಾಗಿ ಪ್ರಶ್ನೆಗಳು ಸಾಮಾನ್ಯ ವಿಷಯದ್ದು ಹಾಗೂ ನಮ್ಮ ಕ್ಷೇತ್ರಕ್ಕೆ ಸಂಬಂಧ ಪಟ್ಟದ್ದು ಎಂದು ಇರುತ್ತವೆ, ಒಂದೊಂದು ಸಾರಿ ನಮಗೆ ಪೂರ್ಣ ಮಾಹಿತಿ ತಿಳಿಯದ ಬೆಳಗಾವಿಯ ಯಾವುದೋ ಒಂದು ಭಾಗದ ಪ್ರಶ್ನೆ ಬಂದಾಗ ನಾವು ಉಪ ಪ್ರಶ್ನೆ ಕೇಳುತ್ತೇವೆ. ಅಂತಹ ಸಮಯದಲ್ಲಿ ಕಾಲಾಹರಣ ಆಗಬಹುದು. ಆ ರೀತಿ ಆದಾಗ ತಾವು ನಿಯಂತ್ರಣ ಇಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಆರ್. ಎನ್. ನಾಯಕ್.— ಅಧ್ಯಕ್ಷರೇ, ಕೆಲವೊಂದು ಪ್ರಶ್ನೆಗಳಿಗೆ ಸಹಜವಾಗಿ ಹೆಚ್ಚಿನ ಉಪ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಇಂತಹ ಸಮಯದಲ್ಲಿ ಒಂದು ತಾಸಿನಲ್ಲಿ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಬರುವ ರೀತಿಯಲ್ಲಿ ಅವಕಾಶ ಮಾಡಿಕೊಡಬೇಕು ಎನ್ನುವ ಉದ್ದೇಶವನ್ನು ಸದಸ್ಯರು ಇಟ್ಟು ಕೊಳ್ಳಬೇಕಾಗುತ್ತದೆ. ಹಾಗೆಯೇ ತಾವೂ ಕೂಡಾ ೨೦ ಪ್ರಶ್ನೆಗಳನ್ನು ೧ ತಾಸಿನಲ್ಲಿ ಮುಗಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕು. ಆ ಒಂದು ತಾಸಿನಲ್ಲಿ ತಾವು ನಮ್ಮನ್ನು ಕಂಟ್ರೋಲ್ ಮಾಡ ಬೇಕಾಗುತ್ತದೆ. ಪ್ರಶ್ನೆ ಹಾಕಿದವರಿಗೆ ಹೆಚ್ಚು ಉಪ ಪ್ರಶ್ನೆ ಕೇಳಲು ಅವಕಾಶ ಕೊಡದೇ ಪ್ರಶ್ನೆಯನ್ನು ಯಾರು ಕೇಳಿರುತ್ತಾರೆ ಅವರಿಗೆ ಸ್ವಲ್ಪ ಅವಕಾಶ ಕೊಟ್ಟರೆ ಎಲ್ಲರಿಗೂ ಅನುಕೂಲ ಆಗಬಹುದು. ಇಲ್ಲದಿದ್ದರೆ ಈ ರೀತಿ ಲ್ಯಾಪ್ಸ್ ಆದರೆ ಇನ್ನು ಮುಂದೆ ಪ್ರಶ್ನೆ ಕೇಳುವುದೇ ಬೇಡ ಎನ್ನುವ ಪರಿಸ್ಥಿತಿಗೆ ನಾವು ತಲುಪುವುದು ದೂರವಿಲ್ಲ. ಎಲ್ಲಾ ಸದಸ್ಯರಿಗೂ ಹಾಗೆಯೇ ಆಗಿದೆ. ತಾವು ಸ್ವಲ್ಪ ಉಪ ಪ್ರಶ್ನೆ ಕೇಳುವವರಿಗೆ ಕಡಿಮೆ ಅವಕಾಶ ಕೊಟ್ಟರೆ. ಆ ಬಗ್ಗೆ ಅವರೂ ತಿಳಿದುಕೊಂಡರೆ ಒಳ್ಳೆಯದು ದಾಗುತ್ತದೆಂದು ನಾನು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.— ಮಾನ್ಯ ಅಧ್ಯಕ್ಷರೇ, ಇದೀಗ ಮಾನ್ಯ ವಿರೋಧ ಪಕ್ಷದ ನಾಯಕರು ಈ ಪ್ರಶ್ನೋತ್ತರ ಸಮಯದ ಬಗ್ಗೆ ಏನು ತಮ್ಮ ಅಭಿಪ್ರಾಯ ವ್ಯಕ್ತ ಮಾಡಿದ್ದಾರೋ ಅದನ್ನು ನಿಜಕ್ಕೂ ಈ ಮಾನ್ಯ ಸದನದ ಎಲ್ಲ ಸದಸ್ಯರೂ ಗಮನಿಸತಕ್ಕದ್ದು ಸೂಕ್ತ. ಅವರು ಹೇಳಿದ ಹಾಗೆ ಇದು ''ಪ್ರಶ್ನೋತ್ತರ ಹವರ್'' ನಾನು ಇಲ್ಲಿ ಹಿಂದೆ ೧೯೫೭ರಿಂದ ೧೯೭೧ರವರೆಗೆ ಕೆಲಸ ಮಾಡಿದ್ದೇನೆ. ಹಾಗೇ ಕೇಂದ್ರದಲ್ಲಿ ರಾಜ್ಯ ಸಭೆ ಹಾಗೂ ಲೋಕ ಸಭೆಯಲ್ಲಿ ಕೂಡಾ ಸುಮಾರು ೧೬-೧೭ ವರ್ಷಗಳ ಕಾಲ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಅಲ್ಲಿ ಸಹ ಕ್ವಶ್ಚನ್ ಹವರ್ ಇರುವುದು ಒಂದೇಗಂಟೆ. ಅಲ್ಲೂ ಎಷ್ಟೇ ಮುಖ್ಯ ಪ್ರಶ್ನೆಗಳು ಇದ್ದರೂ ಕೂಡಾ ಕ್ವಶ್ಚನ್ ಹವರ್ ಈಸ್ ಓವರ್ ಎಂದಾಗ ಜೀರೋ ಹವರ್ ಪ್ರಾರಂಭವಾಗುತ್ತದೆ. ಜೀರೋ ಹವರ್ ಎಂಬುದು ನಿಯಮದಲ್ಲಿ ಇಲ್ಲ. ಆದರೂ ಆಟೋ

ಮೆಟಿಕ್ಕಾಗಿ ಜೀರೋ ಹವರ್ ಸ್ಟಾರ್ಟ್ ಆಗುವುದರಿಂದ ಎಲ್ಲರೂ ತಮ್ಮ ತಮ್ಮ ವಿಷಯಗಳ ಬಗ್ಗೆ ಹೇಳಲು ನಿಂತುಬಿಡುತ್ತಾರೆ. ಜೊತೆಗೆ ಯಾರೂ ನಮಗೆ ಇನ್ನು ಮಹತ್ವವಾದ ಪ್ರಶ್ನೆಗಳಿವೆ ಅದಕ್ಕಾಗಿ ಕೊಶ್ಚನ್ ಹವರ್ ಮುಂದುವರಿಸಿ ಎಂದು ಇಲ್ಲಿಯವರೆಗೆ ಡಿಮಾಂಡ್ ಬಂದದ್ದು ಅಷ್ಟಿ ಅಲ್ಲ. ಪ್ರಶ್ನೆಗಳನ್ನು ಅನೇಕ ಸದಸ್ಯರುಗಳು ಹಾಕುತ್ತಾರೆ. ಪಾರ್ಲಿಮೆಂಟರಿ ಪದ್ಧತಿಯಲ್ಲಿರುವಂತೆ ಮಾನ್ಯ ಸದಸ್ಯರು ಸ್ಟಾರ್ಡ್ ಕೊಶ್ಚನ್ ಎಂದು ಕಳುಹಿಸುತ್ತಾರೆ. ಅದೆಲ್ಲಾ ಸ್ಟಾರ್ಡ ಆಗುವುದಿಲ್ಲ. ಆ ಸ್ಟಾರ್ಡ್ ಕೊಶ್ಚನ್‌ಗಳಲ್ಲಿ ಲಾಟ್ ತೆಗೆದು ದಿನಕ್ಕೆ ಕೇವಲ ೮-೯-೧೦ ಪ್ರಶ್ನೆಗಳು ಎಂದು ತೀರ್ಮಾನ ಮಾಡಿಕೊಂಡು, ೧-೨-೩-೪ ಹೀಗೆ ಆರ್ಡರ್‌ನಲ್ಲಿ ಪಟ್ಟಿ ಮಾಡುತ್ತಾರೆ ಈ ರೀತಿ ಮಾಡುವಾಗ ಯಾವುದು ಸ್ಟಾರ್ಡ್‌ನಲ್ಲಿ ಬರುತ್ತದೆ ಯಾವುದು ಬರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಈ ರೀತಿ ಲಾಟ್‌ನಲ್ಲಿ ತೆಗೆದುಕೊಳ್ಳುವಾಗ ಯಾವುದು ಮಹತ್ವವಾದದ್ದು ಇರುತ್ತದೆ ಅದು ನಂಬರ್ ೧೦ಕ್ಕೆ ಹೋಗುತ್ತದೆ. ಯಾವುದು ಮಹತ್ವ ಇರಲಾರದು, ಅದು ನಂಬರ್ ೧ರಲ್ಲಿ ಬರುತ್ತದೆ. ಈ ಪದ್ಧತಿಯನ್ನು ನಾವು ಅನುಸರಿಸಿದ ಮೇಲೆ ಒಂದು ಗಂಟೆಯ ಕಾಲದ ಮೇಲೆ ಪ್ರಶ್ನೋತ್ತರ ಇರುವುದು ಸರಿಯಲ್ಲ. ಇಲ್ಲಿರುವ ಪ್ರಶ್ನೆ ಏನೆಂದರೆ ಅನೇಕ ಮಾನ್ಯ ಸದಸ್ಯರು ತಮ್ಮ ಸಮಸ್ಯೆಗಳು ಏನಿರುತ್ತವೆ, ಅದನ್ನು ಹೇಗೆ ಪ್ರಸ್ತಾಪ ಮಾಡಬೇಕೆಂದರೆ. ಅರ್ಧ ಗಂಟೆಯ ಕಾಲ ಚರ್ಚೆಗೆ ಅವಕಾಶ ಇರುತ್ತದೆ. ಅರ್ಧ ಗಂಟೆ ಕಾಲ ಡಿಸ್‌ಕಷನ್ ಅಂದರೆ ಸಭೆಯು ಎಲ್ಲಾ ಕಾರ್ಯಕಲಾಪಗಳನ್ನು ಮುಂಗಿಸಿ ಕೊನೆಗೆ ಅರ್ಧ ಗಂಟೆಯ ಕಾಲ ಯಾವ ಸದಸ್ಯರು ಪ್ರಶ್ನೆ ಹಾಕಿರುತ್ತಾರೆ ಅವರು ಚರ್ಚೆ ಮಾತನಾಡುವುದರ ಜೊತೆಗೆ ಎರಡನೆಯವರು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿರುತ್ತಾರೆ. ಈ ಅರ್ಧ ಗಂಟೆ ಹೋಗಿ ಳಿಸಿ ನಿಮಿಷ ಅಥವಾ ೧ ಗಂಟೆ ಯವರೆಗೂ ಅದು ಹೋಗಬಹುದು. ಅದು ಆಲ್ಲದೆ ಮತ್ತೆ ಏನಾದರೂ ಅತಿ ಮುಖ್ಯವಾದದ್ದು ಇದ್ದರೆ, ಪವರ್ ಬಗ್ಗೆ ಒಂದು ಪ್ರಶ್ನೆ ಹಾಕಿದಾಗ ನಾವು ಕೊಡುವ ಉತ್ತರ ತಮಗೆ ಸಮಾಧಾನವಾಗದಿದ್ದಾಗ ಪ್ರಶ್ನೆ ಹಾಕಿದವರು ಮತ್ತು ಆ ಪ್ರಶ್ನೇ ಇಡೀ ಕರ್ನಾಟಕದ ರೈತರ ಪ್ರಶ್ನೆ ಸಹ ಆಗಿರುವುದರಿಂದ ಇಂತಹ ಮಹತ್ವವಾದ ಪ್ರಶ್ನೆಗಳು ಇದ್ದರೆ ರೈತರಿಗೆ ಸಾಕಷ್ಟು ವಿದ್ಯುಚ್ಛಕ್ತಿ ಸರಬರಾಜು ಆಗದಿದ್ದಾಗ ಅದು ವಿವರವಾಗಿ ಡಿಸ್‌ಕಷನ್ ಆಗಬೇಕು. ಅಂತಹ ಸಂದರ್ಭಗಳಲ್ಲಿ ಸ್ಪೆಷಲ್ ಡಿಸ್‌ಕಷನ್ ಆಗುತ್ತದೆ ಇಂತಹ ಮಹತ್ವವಾದ ಪ್ರಶ್ನೆಗಳಿಗೆ ಬಹುಶಃ ಅನೇಕ ಅವಕಾಶಗಳು ಸಿಗುತ್ತವೆ. ಆ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯ. ನಾನು ಇಷ್ಟೇ ಹೇಳುವುದು. ಇಡೀ ಕರ್ನಾಟಕ ಒಂದೇ ಅಲ್ಲ, ಎಲ್ಲಾ ಕಡೆ ಇರುವ ಸದನಗಳು ಪ್ರಶ್ನೋತ್ತರಕ್ಕೆ ತೆಗೆದು ಕೊಂಡಿರತಕ್ಕ ಸಮಯ ಒಂದು ಗಂಟೆ ಹೊರತಾಗಿ ಅದಕ್ಕಿಂತ ಹೆಚ್ಚು ಇಲ್ಲ. ಮತ್ತು ನನಗೆ ಗೊತ್ತಿರುವ ಹಾಗೆ ಬಹಳ ಮುಖ್ಯವಾದ ಪ್ರಶ್ನೆ ಕೊನೆಗೆ ಬಂದರೆ, ನಾನು ನಿರ್ದೇಶನ ಕೊಡುವುದಕ್ಕೆ ಹೋಗುವುದಿಲ್ಲ. ಸಂಬಂಧಪಟ್ಟವರು ಅದು ರೀಚ್ ಆಗುವುದಿಲ್ಲ ಏನು ಮಾಡಬೇಕೆಂದು ವಿಚಾರ ಮಾಡ ಬೇಕು. ಮೊದಲು ಬರತಕ್ಕ ಪ್ರಶ್ನೆಗಳಿಗೆ ಅದು ಮುಖ್ಯವಾಗಿಲ್ಲವಿದ್ದರೆ ನೀವು ಆಬ್ಸೆಂಟ್ ಆಗಿ ನನ್ನದು ಬಹಳ ಮುಖ್ಯವಾದುದು ಇದೆ ನೀವು ಕೊಶ್ಚನ್ ಆವರ್‌ನಲ್ಲಿ ಹೊರಗಡೆ ಇರಿಯೆಂದು ನಾವು ಹೇಳುವಂತಹ ಘಟನೆಗಳು ಇವೆ. ಅನೇಕ ಸಲ ಮಹತ್ವವಾದ ಪ್ರಶ್ನೆಗಳು ಇದ್ದರೆ ಈ ರೀತಿ ನಡೆದಿರುತ್ತವೆ. ಎಂತಹ ಮಹತ್ವವಾದ ಪ್ರಶ್ನೆಗಳು ಇದ್ದರೂ ೧೨ ಗಂಟೆಯ ಮೇಲೆ ಕೊಶ್ಚನ್ ಹವರ್ ಮುಗಿಯಿತು ಎಂದು ಸ್ಪೀಕರ್‌ರವರು ಹೇಳಿದ ಮೇಲೆ ತಕ್ಷಣ ಜೀರೋ ಹವರ್ ಸ್ಟಾರ್ಟ್ ಆಗುತ್ತದೆ. ಆಮೇಲೆ ಕೊಶ್ಚನ್ ಹವರ್ ಮುಂದುವರಿಸುವುದು ಸತ್‌ಸಂಪ್ರದಾಯವಲ್ಲ. ಈಗಿನ ನಿಯಮವನ್ನು ಉಳಿಸಿಕೊಂಡು ಬೆಳೆಸಿ ಕೊಂಡು ಹೋಗಬೇಕೆನ್ನುವುದು ನನ್ನ ಸಲಹೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೆ, ತಮಗೆ ಅಭಿನಂದಿಸಬೇಕು. ಒಂದು ದಿನದ ಕಾರ್ಯಕಲಾಪದಲ್ಲಿ ೧೯-೨೦-೨೧ ಪ್ರಶ್ನೆಗಳು ಆಚ್ಚಾಗಿರುತ್ತವೆ ಆ ಎಲ್ಲ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ ದೊರಕಬೇಕು ಎನ್ನುವುದು ತಮ್ಮ ಅಭಿಪ್ರಾಯ. ಇದು ನಮ್ಮೆಲ್ಲರ ಅಭಿಪ್ರಾಯವೂ ಹೌದು. ರೂಲ್ಸ್ ಪ್ರಕಾರ ಒಂದು ಗಂಟೆಗಿಂತ ಹೆಚ್ಚಾಗಿ ಸಮಯವನ್ನು ಮುಂದುವರಿಸುವುದಕ್ಕೆ ತೊಂದರೆಯಾಗುತ್ತದೆನ್ನುವ ದೃಷ್ಟಿಯಿಂದ ಈ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಪಡೆಯುತ್ತಾ ಇದ್ದೀರಿ ಎಂದು ನಾನು ಭಾವಿಸುತ್ತೇನೆ. ನಾನು ಮೊದಲೇ ತಮಗೆ ಅಭಿನಂದನೆಯ ಮಾತನ್ನು ಹೇಳಿದ್ದೇನೆ. ನಮ್ಮೆಲ್ಲರ ಆಸೆ ಕಳಕಳಿ ಹಾಗೂ ತಮ್ಮಲ್ಲಿ ವಿನಂತಿ ಏನೆಂದರೆ ಎಲ್ಲಾ ಪ್ರಶ್ನೆಗಳಿಗೂ ಕೂಡ ಸದನದಲ್ಲಿ ಉತ್ತರ ಬರಬೇಕು ಆದಕ್ಕೆ ಅವಕಾಶ ದೊರಕಬೇಕು. ಸರ್ಕಾರ ಉತ್ತರವನ್ನು ಕೊಟ್ಟರೆ ಅದರ ಸದುದ್ದೇಶ ಈಡೇರಿದಂತಾಗುತ್ತದೆ ಎಂಬುದು ನಮ್ಮೆಲ್ಲರ ಆಸೆ ಆದ್ದರಿಂದ ಅದಕ್ಕೊಂದು ವ್ಯವಸ್ಥೆ ಆಗಲೇಬೇಕು. ಆದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆಯನ್ನು ಸಂಪೂರ್ಣವಾಗಿ ಇಲ್ಲಿ ಮಾಡುವುದಕ್ಕಾಗುವುದಿಲ್ಲ. ಸಮಯದ ಕೊರತೆ ಎನ್ನುವ ಮಾತನ್ನು ಹೇಳಿದ್ದೀರಿ. ಸ್ಥಳೀಯವಾಗಿರತಕ್ಕ ಸಮಸ್ಯೆಗಳು ಇಲ್ಲಿ ಚರ್ಚೆಗೆ ಬರುತ್ತವೆ. ಬೇರೆ ಬೇರೆ ಪ್ರಶ್ನೆಗಳಿಗೆ ಉಪ ಪ್ರಶ್ನೆಗಳನ್ನು ಕೇಳತಕ್ಕ ಪ್ರಶ್ನೆಗಳಿರುತ್ತವೆ. ಜಾರ್ಡರ್ ಡಿಸ್‌ಪ್ಯೂಟ್ ಮೇಲೆ ಪ್ರಶ್ನೆ ಬಂದಾಗ ಆ ಬಗ್ಗೆ ಎಲ್ಲರೂ ಪ್ರಶ್ನೆ

ಕೇಳುತ್ತಾರೆ. ಆದೇ ಮಂಡಿಗೆರೆಯ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಎಲ್ಲರೂ ಪ್ರಶ್ನೆ ಕೇಳುವುದಕ್ಕೆ ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ ನಾವಾದರೂ ಸಮಯದ ಮಿತಿ ಹಾಕಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ನನಗೆ ಜ್ಞಾಪಕವಿರುವಂತೆ ನನ್ನ ಅನುಭವದಲ್ಲಿ ಒಂದು ಪ್ರಶ್ನೆಗೆ ಸುಮಾರು ಒಂದು ಅಥವಾ ಎರಡು ಉಪ ಪ್ರಶ್ನೆಗಳನ್ನು ಕೇಳಲು ಮತ್ತು ಯಾವ ಮಾನ್ಯ ಸದಸ್ಯರು ಮೂಲ ಪ್ರಶ್ನೆಯನ್ನು ಹಾಕಿರುತ್ತಾರೆ, ಅವರಿಗೆ ಕೊನೆಗೆ ಒಂದು ಉಪ ಪ್ರಶ್ನೆಯನ್ನು ಹಾಕುವುದಕ್ಕೆ ಅವಕಾಶ ಕೊಟ್ಟರೆ ಒಟ್ಟು ನಾಲ್ಕು ಸಾರಿ ಚಾನ್ಸ್ ಸಿಕ್ಕ ಹಾಗೆ ಆಗುತ್ತದೆ. ಒಟ್ಟು ೨೦ ಪ್ರಶ್ನೆಗಳಿಂದರೆ ಒಂದು ಪ್ರಶ್ನೆಗೆ ಎರಡು ನಿಮಿಷ ಚಿಲ್ಲರೆ ಅಂದುಕೊಂಡರೂ ಸಹ, ಮಧ್ಯೆ ಸ್ವಲ್ಪ ಎಳೆದುಕೊಂಡು ಹೋಗುತ್ತದೆ ..

ಅಧ್ಯಕ್ಷರು.— ಮೂಲ ಪ್ರಶ್ನೆ ಕೇಳತಕ್ಕಂಥವರು ಎದ್ದು ನಿಂತು ಸ್ವಿಚ್ ಹಾಕಿ ಪ್ರಶ್ನೆ ಕೇಳಿ ಮುಗಿಸತಕ್ಕೆಂಥ ಪದ್ಧತಿಯನ್ನು ಜಾರಿಗೆ ತರಬೇಕು. ಅದಕ್ಕೆ ಮಂತ್ರಿಗಳು ಎದ್ದು ನಿಂತು ಸ್ವಿಚ್ ಹಾಕಿ ಉತ್ತರ ಕೊಡಬೇಕು. ಒಂದು ಪ್ರಶ್ನೆಗೆ ಎರಡು ನಿಮಿಷ ಸಾಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ರೂಲ್ಸ್ ಕಮಿಟಿಯನ್ನು ತಾವು ಮಾಡಿದರೆ ಬಹಳ ಒಳ್ಳೆಯದು. ಸಮಿತಿಯನ್ನು ತಕ್ಷಣ ರಚನೆ ಮಾಡುವುದು ಒಳ್ಳೆಯದು. ಹಿಂದೆ ನಾನು ವಿರೋಧ ಪಕ್ಷದಲ್ಲಿ ಕುಳಿತು ಕೊಂಡಿದ್ದಾಗ ಕೂಡ ಅವರಿರಲಿ, ನಾವಿರಲಿ ಯಾರೇ ಇದ್ದರೂ ಕೂಡ ಸದಸ್ಯರು ಪ್ರಶ್ನೆ ಕೇಳಬೇಕಾದರೆ ಬಹಳ ತೊಂದರೆ ಬರುತ್ತಿತ್ತು. ತಮ್ಮ ಅನುಭವದಲ್ಲಿ ಸಹ ಇರಬಹುದು. ಹಿಂದೆ ಉತ್ತರಗಳು ಪ್ರಶ್ನೆಗಳ ಜೊತೆಯಲ್ಲೇ ಒಂದು ದಿವಸ ಮುಂಚಿತವಾಗಿ ಅಚ್ಚಾಗಿ ಬರುತ್ತಿದ್ದವು. ಮಾನ್ಯಶ್ರೀ ಚಂದ್ರೇಗೌಡರು ಸ್ವಲ್ಪ ಗಮನಿಸಬೇಕು. ಪ್ರಶ್ನೆಗಳಿಗೆ ಉತ್ತರ ಅಚ್ಚಾಗಿ ಒಂದು ದಿವಸ ಮುಂಚಿತವಾಗಿಯೇ ಮನೆಗೆ ಬರುತ್ತಿದ್ದವು. ಆದರಿಂದ ಮಾನ್ಯ ಸದಸ್ಯರುಗಳಿಗೆ ಬಹಳ ಅನುಕೂಲವಾಗುತ್ತಿತ್ತು.

ಅಧ್ಯಕ್ಷರು.— ಇದು ಹೇಗೆ ರೂಢಿ ಬಂತು ಎಂದರೆ ಶ್ರೀ ಮಾವ್ಲಂಕರ್ ಅವರು ಅಧ್ಯಕ್ಷರಾಗಿದ್ದಾಗ ಲೋಕಸಭೆಯಲ್ಲಿ ಮತ್ತು ರಾಜ್ಯ ಸಭೆಯಲ್ಲಿ ಏನು ಪದ್ಧತಿಗಳು ಇದ್ದವು, ಅವನ್ನೇ ಇಲ್ಲಿ ಕೂಡ ಆಳವಡಿಸಿಕೊಳ್ಳಬೇಕು ಎಂಬ ತೀರ್ಮಾನ ತೆಗೆದುಕೊಂಡು, ಕೆಲವಾರು ವರ್ಷಗಳಿಂದ ಪ್ರಶ್ನೆಗೆ ಉತ್ತರವನ್ನು ಓದಿ ಹೇಳತಕ್ಕದ್ದು ರೂಢಿಗೆ ಬಂತು. ಹಿಂದೆ ಇದ್ದಂಥ ಪದ್ಧತಿಯನ್ನು ಬಿಟ್ಟು ಲೋಕ ಸಭೆಯ ಪದ್ಧತಿಯನ್ನು ಜಾರಿಗೆ ತಂದಿದ್ದರಿಂದ ಹೀಗೆ ಆಗಿದೆ.

ಶ್ರೀ ಎಸ್. ಬಂಗಾರಪ್ಪ.—ಈಗ ತಮ್ಮ ಅನುಭವದಲ್ಲಿ ನಮ್ಮ ನಿಯಮಾವಳಿಗಳನ್ನು ಬದಲಾವಣೆ ಮಾಡತಕ್ಕಂಥ ಅಧಿಕಾರ ಸದನಕ್ಕಿದೆ. ಆ ಅಧಿಕಾರ ತಮಗೆ ಇದೆ ನಮಗೆ ಇದೆ ಹಳೆಯ ಪದ್ಧತಿ ಒಳ್ಳೆಯದೆಂದು ನನ್ನ ಭಾವನೆ. ತಕ್ಷಣ ಉತ್ತರ ಸಿಕ್ಕರೆ ಪ್ರಶ್ನೆ ಕೇಳುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಉತ್ತರದ ಪ್ರತಿಗಳು ಸರಿಯಾಗಿ ಸಿಗುವುದಿಲ್ಲ. ಕೆಲವೊಮ್ಮೆ ಎಲ್ಲರೂ ಮೂಕ ಪ್ರೇಕ್ಷಕರಾಗಿ ಸುಮ್ಮನೆ ಕುಳಿತಿರುತ್ತೇವೆ. ಆದ್ದರಿಂದ ತಾವು ದಯವಿಟ್ಟು ರೂಲ್ಸ್ ಸಮಿತಿಯನ್ನು ಮಾಡಿ ಅಮೂಲಾಗ್ರವಾಗಿ ಎಲ್ಲವನ್ನೂ ಒಂದು ಸಲ ನೋಡಿ ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕು, ಯಾವುದನ್ನು ಸೇರಿಸಬೇಕು ಎಂದು ಪರಿಶೀಲನೆ ಮಾಡಿ ಮಾನ್ಯ ಸದಸ್ಯರುಗಳ ಹಕ್ಕುಗಳು ಮೊಟಕು ಆಗದಹಾಗೆ ಯಾವರೀತಿ ಕಾಪಾಡಬಹುದು ಎನ್ನುವ ವಿಚಾರದಲ್ಲಿ ತಾವು ಗಮನ ಹರಿಸುತ್ತೀರಿ ಎಂದು ನಾನು ನಂಬಿದ್ದೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ನಾನುತಮ್ಮಲ್ಲಿ ಕೇಳಿಕೊಳ್ಳುವುದು, ಇಷ್ಟೆ. ಹಿಂದೆ ಕೂಡ ಈ ಪ್ರಶ್ನೆ ಇತ್ತು. ಅಧ್ಯಕ್ಷರು ಅತಿಮುಖ್ಯವಾದ ಪ್ರಶ್ನೆಯನ್ನು ಪರಿಗಣಿಸಿ ಅಧ್ಯಕ್ಷ ಪೀಠದಿಂದಲೇ ಆಜ್ಞೆಯನ್ನು ಕೊಡತಕ್ಕಂಥ ವ್ಯವಸ್ಥೆ ಇದೆ ಅತಿ ಪ್ರಾಮುಖ್ಯವಾದಂಥ ವಿಷಯವನ್ನು ನಿಯಮ ೬೮ ಅಥವಾ ೫೭ರಲ್ಲಿ ಚರ್ಚೆಗೆ ಕೊಡುವುದಿಲ್ಲವೆಂದು ಅಪ್ಪಣೆ ಕೊಡುತ್ತಿದ್ದರು. ಇದರಿಂದ ಹೆಚ್ಚಿನ ಸಮಯ ಉಳಿಯುತ್ತಿತ್ತು. ಹಿಂದಿನ ನಮ್ಮ ಎರಡು ಮೂರು ವರ್ಷಗಳ ಅನುಭವದಲ್ಲಿ ೫ ನಿಮಿಷ ೧೦ ನಿಮಿಷಗಳಲ್ಲಿ ಎಲ್ಲಾ ಪ್ರಶ್ನೆಗಳೂ ಮುಗಿಯುತ್ತಿದ್ದವು. ಉಪಪ್ರಶ್ನೆ ಕೇಳುವಾಗ ಸಣ್ಣಸಣ್ಣ ಭಾಷಣ ಮಾಡುವುದಕ್ಕೆ ಅವಕಾಶ ಕೊಡಬಾರದು. ಇದನ್ನು ಕಡಿತ ಮಾಡಿದರೆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡಬಹುದು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಇತ್ತು ನಾವು ಕೇಳುವ ಪ್ರಶ್ನೆ ನಮ್ಮ ಅದೃಷ್ಟದ ಮೇಲೆ ಬರುತ್ತವೆ. ಚುಕ್ಕೆ ಗುರುತಿನ ಪ್ರಶ್ನೆಗೆಂದು ಅರ್ಜಿ ಹಾಕಿದರೆ ಅದು ಬರುವುದೇ ಇಲ್ಲ. ನಮ್ಮ ಅದೃಷ್ಟದ ಮೇಲೆ ಬಂದರೆ ಉಂಟು, ಇಲ್ಲದಿದ್ದರೆ ಇಲ್ಲ. ಈಗ ಉತ್ತರ ಪಡೆಯುವೇ ಹೋದರೆ ಈ ಆಫೀಸೇಷನದಲ್ಲಿ ಮತ್ತೆ ಉತ್ತರ ಸಿಗುವುದಿಲ್ಲ ಆದಕ್ಕೋಸ್ಕರ ಬಂದಿರತಕ್ಕ ಎಲ್ಲಾ ಪ್ರಶ್ನೆಗಳಿಗೂ ಕೆಲವು ಪ್ರಶ್ನೆಗಳು ಒಂದು ನಿಮಿಷದಲ್ಲಿ ಮುಗಿದರೆ ಕೆಲವಕ್ಕೆ ಎರಡು ನಿಮಿಷ ಸಾಕು,

ಆದ್ದರಿಂದ ಸಮಯವನ್ನು ನಿಗದಿಮಾಡಿ ಎಲ್ಲಾ ಪ್ರಶ್ನೆಗಳಿಗೂ ಅವಕಾಶ ಕೊಡಬೇಕಾಗುತ್ತದೆ. ನಾವು ನಮ್ಮ ನಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೊತ್ತು ಬರುತ್ತೇವೆ. ಆದ್ದರಿಂದ ಇದಕ್ಕೆ ಅವಕಾಶ ಕೊಡಲೇ ಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ನಾವು ಇದರ ಬಗ್ಗೆ ಒಂದು ರೂಲ್ಸ್ ಕಮಿಟಿ ಮಾಡಿ, ಆ ರೂಲ್ಸ್ ಕಮಿಟಿಯ ಮಾರ್ಗದರ್ಶನ ಪಡೆದು, ಅನಂತರ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ನಿಮ್ಮ ಕ್ಷೇತ್ರದ ಸಮಸ್ಯೆಗಳಿರುತ್ತವೆ, ರಾಜ್ಯದ ಸಮಸ್ಯೆಗಳು ಇರುತ್ತವೆ, ರಾಷ್ಟ್ರದ ಸಮಸ್ಯೆಗಳು ಇರುತ್ತವೆ. ಇವುಗಳಿಲ್ಲಕ್ಕೂ ಉತ್ತರಗಳನ್ನು ತರಿಸಿಕೊಡತಕ್ಕ ಕಳಕಳಿ ನನ್ನಲ್ಲಿ ಇದೆ ಎನ್ನುವ ಬಗ್ಗೆ ತಮಗೆ ಅನುಮಾನಬಿಟ್ಟು ಬೇಡವೆಂದು ಹೇಳುತ್ತೇನೆ.

ಈ ದಿವಸ ಬೀರೂರಿನ ಶಾಸಕರಾದ ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ ಅವರ ಜನ್ಮದಿನ. ಅವರ ಈ ಜನ್ಮದಿನದಂದು ನಮ್ಮ ಸದನದ ಎಲ್ಲಾ ಸದಸ್ಯರ ಪರವಾಗಿ ಅನಂತ ಶುಭಾಶಯಗಳನ್ನು ಕೋರಿ, ಅವರಿಗೆ ಭಗವಂತನು ಆಯುರಾರೋಗ್ಯ, ಸುಖ ಸಂತೋಷ ಕೊಡಲೆಂದೂ, ಇನ್ನೂ ಹೆಚ್ಚಿನ ಜನಸೇವೆಯು ಸದವಕಾಶ ಅವರಿಗೆ ದೊರೆಯುವಂತೆಂದೂ ಹಾರೈಸುತ್ತೇನೆ.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ
ರಾಜ್ಯದ ರೈತರ ಸಹಕಾರ ಸಂಘಗಳ ಸಾಲವನ್ನು ಮನ್ನಾ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯ

† ಶ್ರೀ ಬಿ.ಎಸ್. ಯಡಿಯೂರಪ್ಪ.— ಸನ್ಮಾನ್ಯ ಅಧ್ಯಕ್ಷರೇ, ನಾನು ಒಂದು ಅತ್ಯಂತ ಪ್ರಮುಖವಾದ ವಿಚಾರವನ್ನು, ನಿಲುವಳಿ ಸೂಚನೆಯ ಮೂಲಕ ಬೇರೆ ವಿಚಾರಗಳನ್ನು ಈ ಸದನದಲ್ಲಿ ಬದಿಗೊತ್ತಿ ಚರ್ಚೆ ಮಾಡಬೇಕೆಂದು ತಮಗೆ ಕಳಹಿಸಿಕೊಟ್ಟಿದೆ. ತಮಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರ, ಈ ರಾಜ್ಯದ, ಈ ದೇಶದ ರೈತನ ರಾಷ್ಟ್ರೀಕೃತ ಬ್ಯಾಂಕಿನ ೧೦ ಸಾವಿರ ರೂಪಾಯಿ ಒಳಗಿನ ಎಲ್ಲಾ ಸಾಲವನ್ನೂ, ಯಾವುದೇ ಒಂದು ಮಿತಿಯನ್ನು ಅಳವಡಿಸದೇ, ಸಾಲವನ್ನು ಮನ್ನಾ ಮಾಡುವಂಥ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಈ ಸಂದರ್ಭದಲ್ಲಿ ಆಯಾ ರಾಜ್ಯಗಳಿಗೆ ಸ್ವಲ್ಪ ನೆರವನ್ನು ಕೊಟ್ಟಿದ್ದು, ಕೋಆಪರೇಟಿವ್ ಸೊಸೈಟಿಗಳಲ್ಲಿ ತೆಗೆದುಕೊಂಡಿರುವ ಸಾಲವನ್ನೂ ಸಹ ಮನ್ನಾ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡ ವಿಚಾರ ಇವತ್ತು ಎಲ್ಲರಿಗೂ ಗೊತ್ತಿರುವ ಸಂಗತಿ. ತಮ್ಮ ಮೂಲಕ ಈ ಸದನದ ನಾಯಕರಲ್ಲಿ ಹಾಗೂ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ ಈ ವಿಚಾರವಾಗಿ ಸಾಕಷ್ಟು ಚರ್ಚೆಯಾಗಿದೆ. ಇದಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಳ್ಳತಕ್ಕ ಇಚ್ಛೆ ನನಗಿಲ್ಲ. ನಿನ್ನೆ ದಿವಸ ಲಕ್ಷಾಂತರ ಜನ ರೈತರು, ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದರು. ಬೆಂಗಾಲಕ್ಕೆ ತುತ್ತಾದ, ಅತಿವೃಷ್ಟಿಗೆ ತುತ್ತಾದ ರೈತರ ಒತ್ತಾಯದ ಮೇರೆಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಕೊಟ್ಟು, ಅವರ ಗಮನಪವನ್ನು ಸೆಳೆಯತಕ್ಕ ಪ್ರಯತ್ನವನ್ನು ಮಾಡಿದ್ದೇವೆ. ಈಗ ತಮ್ಮ ಮೂಲಕ ಸಭಾನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈಗಾಗಲೇ ರಾಷ್ಟ್ರೀಕೃತ ಬ್ಯಾಂಕುಗಳ ಸಾಲವನ್ನು ಮನ್ನಾ ಮಾಡುವಂಥ ಒಂದು ತೀರ್ಮಾನವನ್ನು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಅಳವಡಿಸಿರತಕ್ಕಂಥ ಈ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಕೋ ಆಪರೇಟೀವ್ ಸೊಸೈಟಿಗಳಲ್ಲಿ ಸಾಲವನ್ನು ತೆಗೆದುಕೊಂಡಿರುವ ರೈತ ತ್ರಿಶಂಕುಸ್ವರ್ಗದಲ್ಲಿದ್ದಾನೆ. ಸಾಲ ಮನ್ನಾ ಆಗುವಂಥ ವಾತಾವರಣವೂ ದೇಶದಲ್ಲಿ ಮಾಡಿರುವಂಥ ಈ ಸಂದರ್ಭದಲ್ಲಿ ಅವನಿಗೆ ನ್ಯಾಯವನ್ನು ದೊರಕಿಸಿಕೊಡಬೇಕಾದುದು ನಮ್ಮ ಕರ್ತವ್ಯ ಆಗಿದೆ ಆದ್ದರಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಕೊನೆಯ ಪಕ್ಷ, ಸಹಕಾರಿ ಸಂಘಗಳಲ್ಲಿ ಸಾಲದ ವಸೂಲಾತಿಯನ್ನು ತಡೆಯಾಜ್ಞೆ ಕೊಟ್ಟು ಕೇಂದ್ರ ಸರ್ಕಾರ ಏನು ನೆರವನ್ನು ಕೊಡುತ್ತದೆ, ಅದೇ ರೀತಿ ರಾಜ್ಯ ಸರ್ಕಾರವೂ ನೆರವನ್ನು ಕೊಟ್ಟು ಅವನ ರಕ್ಷಣೆಗೆ ಬರಬೇಕು. ಈ ವಿಚಾರದಲ್ಲಿ ಒಂದು ವಿವರವಾದ ಚರ್ಚೆಯು ಆಗತ್ಯವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸದನದಲ್ಲಿ ಎಲ್ಲರಿಗೂ ಇದರ ಬಗ್ಗೆ ಆಸಕ್ತಿ ಇದೆ ಅತ್ಯಂತ ಆಗತ್ಯ ಇರುವ ಈ ವಿಷಯದಲ್ಲಿ ತಕ್ಷಣ ತಡೆಯಾಜ್ಞೆ ಕೊಟ್ಟು, ರಾಜ್ಯ ಸರ್ಕಾರ ಇವರ ನೆರವಿಗೆ ಬರುವಂತಹ ತೀರ್ಮಾನ ತೆಗೆದುಕೊಳ್ಳುತ್ತದೆಯೇ ಅಥವಾ ಇದರಲ್ಲಿ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಿರುತ್ತದೆ.